# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162 (ಹೊಸ ಸಂಖ್ಯೆ: 214) ಗಿರಿನಗರ, ಬೆಂಗಳೂರು.

## ನವಂಬರ್ 2022 : ವಾರ್ಡ್ ಸಮಿತಿಯ 1ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21. ದಿನಾಂಕ: 22-09-2021.

******

ದಿನಾಂಕ : 05-11-2022

ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ

ಸಮಯ : ಪೂರ್ವಾಹ್ನ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಮೇಶ್ .ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-162, ಗಿರಿನಗರ |
| 3 | ಶ್ರೀಮತಿ ಆರ್. ನಾಗಮಣಿ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 4 | ಶ್ರೀಮತಿ ಲಕ್ಷ್ಮಿದೇವಿ | ಕಿರಿಯ ಅಭಿಯಂತರರು (ಬೆಸ್ಕಾಂ) |
| 5 | ಶ್ರೀ ಮಂಜುನಾಥ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 6 | ಶ್ರೀಮತಿ ಕುಮುದ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ ರವಿಕುಮಾರ್ .ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-162 |
| 8 | ಶ್ರೀ ಸಚಿನ್ ಕೆ.ಪಿ | ಮಾರ್ಷಲ್ |
| 9 | ಶ್ರೀ ಗಿರೀಶ್ ಪ್ರಸಾದ್ | ಸಾರ್ವಜನಿಕರು |
| 10 | ಶ್ರೀ ರವಿ.ಆರ್ | ಸಾರ್ವಜನಿಕರು |
| 11 | ಶ್ರೀ ನರೇಂದ್ರ | ಸಾರ್ವಜನಿಕರು |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ಶ್ರೀವಿದ್ಯಾನಗರ 1ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಕೊಳವೆ ಬದಲಾಯಿಸಲು ಕತ್ತರಿಸಿದ್ದ ರಸ್ತೆಯನ್ನು ದುರಸ್ಥಿಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಅಧ್ಯಕ್ಷರು ತಿಳಿಸಿದರು.

2. ಗಿರಿನಗರ 2ನೇ ಹಂತ, 1ನೇ ಡಿ ಮುಖ್ಯರಸ್ತೆಯಲ್ಲಿ ಕಸ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲದಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಕೂಡಲೇ ಈ ಬಗ್ಗೆ ಸ್ಥಳ ಪರಿಶೀಲಿಸಿ ತ್ಯಾಜ್ಯವನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

3. ನಾಗೇಂದ್ರ ಬ್ಲಾಕ್ 7ನೇ ಮುಖ್ಯರಸ್ತೆ ಮತ್ತು 10ನೇ ಮುಖ್ಯರಸ್ತೆಯಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ

ಹಾಜರಿದ್ದ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರಿಗೆ ಅಧ್ಯಕ್ಷರು ಸೂಚಿಸಿದರು.

4. ಬಿ.ಎಸ್.ಕೆ 3ನೇ ಹಂತ, 6ನೇ ಬ್ಲಾಕ್ 1ನೇ ಜಿ ಅಡ್ಡರಸ್ತೆಯಲ್ಲಿ ಮರದ ರೆಂಬೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

5. ಗಿರಿನಗರ 80 ಅಡಿ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಹಾಗೂ ಪೋಲೀಸ್ ಠಾಣೆ ಸಿಬ್ಬಂದಿಗೆ ಅಧ್ಯಕ್ಷರು ಸೂಚಿಸಿದರು.

6. ಗಿರಿನಗರ 4ನೇ ಫೇಸ್, 3ನೇ ಮುಖ್ಯರಸ್ತೆ, ಸ್ವತ್ತಿನ ಸಂಖ್ಯೆ: 3427 ಬಳಿ ಒಳಚರಂಡಿ ಕೊಳವೆ ಸಂಪರ್ಕ ಕಲ್ಪಿಸಿಕೊಡಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಅಧ್ಯಕ್ಷರು ತಿಳಿಸಿದರು.

7. 80 ಅಡಿ ಮುಖ್ಯರಸ್ತೆಯಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಿದ್ದು, ಹೊಸ ಬೀದಿ ದೀಪಗಳು ಕಾರ್ಯ ರೂಪಕ್ಕೆ ಬರುವ ವರೆಗೆ ಹಳೆಯ ಬೀದಿ ದೀಪಗಳನ್ನು ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರಿಗೆ ಅಧ್ಯಕ್ಷರು ಸೂಚಿಸಿದರು.

8. 80 ಅಡಿ ಮುಖ್ಯರಸ್ತೆ. ಎಸ್.ಬಿ.ಎಂ ಕಾಲೋನಿ ಬಸ್ ನಿಲ್ದಾಣದ ಬಳಿ ಗುಂಡಿಗಳನ್ನು ಮುಚ್ಚಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

9. ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನಗಳಲ್ಲಿನ ಇ-ಟಾಯ್ಲೆಟ್ ಗಳ ನಿರ್ವಹಣೆಯನ್ನು ಶ್ರೀ ಸತ್ಯ ಪ್ರಕಾಶ್ ರವರಿಗೆ ನೀಡಲಾಗಿದ್ದು, ನಿರ್ವಹಣೆ ಉಸ್ತುವಾರಿಯನ್ನು ಪರಿಶೀಲಿಸಿ ಮುಂದಿನ ವಾರ್ಡ್ ಸಭೆಗೆ ವರದಿ ನೀಡಲು ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಪರಿವೀಕ್ಷಕರಾದ ಶ್ರೀಮತಿ ಭೂದೇವಿ ರವರಿಗೆ ಅಧ್ಯಕ್ಷರು ಸೂಚಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು".

05/11/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 214, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 214, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.